ಓಎಸ್ 111/2022

ಪಿಡಬ್ಲ್ಯೂ-1

ದಿ: **24.06.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಂದುವರೆದ ಪಾಟೀ ಸವಾಲು: ಶ್ರೀ ಬಿಬಿ ವಕೀಲರಿಂದ</u>**

ನನಗೆ ಈಗ 75 ವರ್ಷ ವಯಸ್ಸಾಗಿದೆ ಎಂದರೆ ಸರಿ. ನನ್ನ ತಂದೆಯ ವಿರುದ್ಧ 1989 ರಲ್ಲಿ ನಂಜನಗೂಡಿನ ನ್ಯಾಯಾಲಯದಲ್ಲಿ ದಾವಾ ಹಾಕಿದಾಗ ನನಗೆ 30 ವರ್ಷ ವಯಸ್ಸು ಆಗಿದ್ದಿರಬಹುದು. ನನಗೆ 1989 ರಲ್ಲಿ ನನ್ನ ತಂದೆಯ ವಿರುದ್ಧ ಪ್ರತಿವಾದಿಯರು ದಾಖಲು ಮಾಡಿದ ದಾವೆಯ ಬಗ್ಗೆ ನಿಖರವಾಗಿ ಗೊತ್ತು. ಮಹದೇವಪ್ಪ ರವರು ಆ ದಾವೆಯಲ್ಲಿ ಸ.ನಂ. 196/1 ಮತ್ತು 197/1 ರ ಒಟ್ಟು 5 ಎಕರೆ 13 ಗುಂಟೆಗೆ ದಾವಾ ಹಾಕಿದ್ದರು ಎಂದರೆ ಸರಿ. ಅವರು ಸ.ನಂ. 196/1 ರಲ್ಲಿ 3 ಎಕರೆ 26 ಗುಂಟೆ, ಮತ್ತು 197/1 ರಲ್ಲಿ 1 ಎಕರೆ 27 ಗುಂಟೆಗೆ ದಾವಾ ಹಾಕಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕೊಂಡುಕೊಳ್ಳುವಾಗ ಸರ್ವೆ ಮಾಡಿಸಿ ಕೊಂಡುಕೊಳ್ಳಬೇಕು ಎಂದು ನುಡಿಯುತ್ತಾರೆ.

ದಿಃ 26.03.1928 ರಲ್ಲಿ ನನ್ನ ಅಜ್ಜಿ ಗೋಪಮ್ಮ ನನ್ನ ತಂದೆ ಮುದ್ದಪ್ಪನಿಗೆ 8 ಎಕರೆ 12 ಗುಂಟೆ ಜಮೀನನ್ನು ಬರೆದುಕೊಟ್ಟಿರುತ್ತಾರೆ. ದಿಃ 21.03.1945 ರಲ್ಲೂ ಸಹಾ ನನ್ನ ಅಜ್ಜಿ ಗೋಪಮ್ಮ ನನ್ನ ತಂದೆ ಮುದ್ದಪ್ಪನಿಗೆ 8 ಎಕರೆ 12 ಗುಂಟೆ ಜಮೀನನ್ನು ಬರೆದುಕೊಟ್ಟಿರುತ್ತಾರೆ. ನಮ್ಮ ಒಟ್ಟು ಆಸ್ತಿ 16 ಎಕರೆ 24 ಗುಂಟೆ. 16 ಎಕರೆ 24 ಗುಂಟೆಯಲ್ಲಿ 8 ಎಕರೆ 12 ಗುಂಟೆಯು ನನ್ನ ಅಜ್ಜಿ ತಮ್ಮನಾದ ಶಿವಪ್ಪನ ಹೆಸರಿನಲ್ಲಿ ಇದೆ , ನಮ್ಮ ಹೆಸರಿನಲ್ಲಿ 8 ಎಕರೆ 12 ಗುಂಟೆ ಇದೆ. ಶಿವಪ್ಪನಿಗೆ 8 ಎಕರೆ 12 ಗುಂಟೆ ಹೇಗೆ ಹೋಯಿತು ಎಂದು ನನಗೆ ಗೊತ್ತಿಲ್ಲ. ನಾವು 8 ಎಕರೆ 12 ಗುಂಟೆ ಜಮೀನಿಗೆ ನಮ್ಮ ಹೆಸರಿಗೆ ಬಂದ ನಂತರ ಹದ್ದುಬಸ್ತು ಮಾಡಿಸಿಲ್ಲ. ನಮ್ಮ ಜಮೀನಿನ ಪಶ್ಚಿಮಕ್ಕೆ ಶಿವಪ್ಪ ರವರ ಜಮೀನು ಇದೆ. ದಾವಾ ಆಸ್ತಿಯ ಸ.ನಂ. 196/2 ರ 2 ಎಕರೆ 27 ಗುಂಟೆ ಸರಿಯಿಲ್ಲ. ಸ.ನಂ. 197/2 ರಲ್ಲಿನ 1 ಎಕರೆ 27 ಗುಂಟೆಗೆ ಸಂಬಂಧಪಟ್ಟಂತೆ ಹದ್ದುಬಸ್ತು ಮಾಡಿಸಿಲ್ಲ. ನಿಮ್ಮ ಹೆಸರಿನಲ್ಲಿ ಸ.ನಂ. 196/2 ರ 2 ಎಕರೆ 27 ಗುಂಟೆಯಂತಿರುವ ನಿಪಿ 3 ರಂತೆ ಇರುವ ಆರ್.ಟಿ.ಸಿ ಎಂದರೆ ಸಾಕ್ಷಿಯು ಅದು ಸರಿಯಿಲ್ಲ ಎಂದು ನುಡಿಯುತ್ತಾರೆ. ಸ.ನಂ. 197/2 ರ ನಿಪಿ 4 ರ ಆರ್.ಟಿ.ಸಿ ಇರಿ ಇದೆ. ದಾವಾ ಆಸ್ತಿ 1 ನಮ್ಮ ಹೆಸರಿಗೆ ಬರುವಾಗ ಯಾವುದೇ ರೆವಿನ್ಯೂ ಸ್ಕೆಚ್ ಮಾಡಿಸಿಲ್ಲ. ಸ.ನಂ. 196/2 ರ ನಿಪಿ 3 ರ ಆರ್.ಟಿ.ಸಿ ಸರಿಯಿಲ್ಲ , ಕಾರಣ ಅದು ಕಡಿಮೆ ಬಂದಿದೆ, ತಾಲ್ಲೂಕು ಕಛೇರಿಯವರು ತಪ್ಪು ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಓಎಸ್ 111/2022

ಪಿಡಬ್ಲ್ಯೂ-1

ನಿಪಿ 3 ಮತ್ತು 4 ರ ಆರ್.ಟಿ.ಸಿ ಯಂತೆ ನನ್ನ ಹೆಸರಿಗೆ ಒಟ್ಟು 4 ಎಕರೆ 9 ಗುಂಟೆ ಇದೆ ಎಂದರೆ ಸಾಕ್ಷಿಯು ನನಗೆ 4 ಎಕರೆ 31 ಗುಂಟೆ ಇರಬೇಕು ಎಂದು ನುಡಿಯುತ್ತಾರೆ. ನಿಪಿ 3 ಬದಲಾಗಿ ಎಷ್ಟು ವರ್ಷಗಳಾಗಿದೆ ಎಂದು ಗೊತ್ತಿಲ್ಲ. ನಾನು ಈ ದಾವಾ ಹಾಕುವ ಪೂರ್ವದಲ್ಲಿ ತಹಸೀಲ್ದಾರ್ ರವರು ಮಾಡಿರುವ ಖಾತಾ ಆದೇಶ ಸರಿಯಿಲ್ಲ ಎಂಬ ಬಗ್ಗೆ ಯಾವುದೇ ಅಪೀಲನ್ನು ಸಲ್ಲಿಸಿಲ್ಲ. 2 ಎಕರೆ 22 ಗುಂಟೆ ನಮ್ಮ ದಾವಾ ಆಸ್ತಿಯ ಪಶ್ಚಿಮಕ್ಕೆ ಭಾಗಕ್ಕೆ ಬರುತ್ತದೆ. ನಂಜನಗೂಡಿನ ಅಸಲು ದಾವೆ ಮುಗಿದ ನಂತರ ನಾವು ಮಾನ್ಯ ಹಿರಿಯ ನ್ಯಾಯಾಲಯಕ್ಕೆ ಅಪೀಲು ಸಂಖ್ಯೆ 47/1993 ರಂತೆ ಸಲ್ಲಿಸಿದ ಬಗ್ಗೆ ಗೊತ್ತು. ನಂಜನಗೂಡು ನ್ಯಾಯಾಲಯದಲ್ಲಿ ಸಲ್ಲಿಸಿದ ಅಪೀಲು ಅಲ್ಲಿನ ಅಪೀಲಿನಲ್ಲಿ ಇರುವ ದಾವಾ ಆಸ್ತಿಯ ವಿಸ್ತೀರ್ಣಕ್ಕೆ ಮಾತ್ರ ಡಿಕ್ರಿಯಾಗಿದೆ ಎಂದರೆ ಸರಿ. ಆನಂತರ ಪ್ರತಿವಾದಿಗಳ ತಂದೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಅಪೀಲು ಸಂಖ್ಯೆ 744/2000 ರಂತೆ ಅಪೀಲು ಹಾಕಿದ್ದರು ಎಂದರೆ ಸರಿ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಅಪೀಲು ಸಂಖ್ಯೆ 744/2000 ರಲ್ಲಿ ಅಪೀಲು ಪುರಸ್ಕೃತವಾಗಿ ಮಹದೇವಪ್ಪ ರವರು ಕೊಂಡುಕೊಂಡ ಕ್ರಯಪತ್ರ 03.03.1982 ರಲ್ಲಿ ಆಸ್ತಿಯ ವಿಸ್ತೀರ್ಣ ಸರಿ ಇದೆ ಎಂಬುದಾಗಿ ತೀರ್ಪು ನೀಡಿದೆ ಎಂದರೆ ಆ ಬಗ್ಗೆ ಮಾಹಿತಿ ಬಂದಿದೆ, ಗೊತ್ತು, ಆದರೆ ಪ್ರತಿವಾದಿಗಳು ಕೊಂಡುಕೊಳ್ಳುವಾಗ ಸರ್ವೆ ಮಾಡಿಸಿ ಕೊಂಡುಕೊಳ್ಳಬೇಕು ಎಂದು ನುಡಿಯುತ್ತಾರೆ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪಿನ ವಿರುದ್ಧ ನಾವು ಯಾವುದೇ ಅಪೀಲನ್ನು ಸಲ್ಲಿಸಿಲ್ಲ ಎಂದರೆ ಸರಿ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಸ.ನಂ. 196/1 ರಲ್ಲಿ 3 ಎಕರೆ 26 ಗುಂಟೆ , 197/1 ರಲ್ಲಿ 1 ಎಕರೆ 27 ಗುಂಟೆ ಜಮೀನು ಪ್ರತಿವಾದಿಗಳಿಗೆ ಸೇರಿದ್ದು ಎಂದು ತೀರ್ಪು ನೀಡಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ನಮಗೆ ಹೊಡೆದು – ಬಡಿದು ಕಿತ್ತುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

1982 ರಲ್ಲಿ ಮಹದೇವಪ್ಪ ರವರಿಗೆ ಕ್ರಯವಾದ ನಂತರ ಹದ್ದುಬಸ್ತಿಗೆ ಬಂದಿತ್ತು ಆಗ ನಾನು ಪೂರ್ವದಲ್ಲಿದ್ದೆ ಶಿವಪ್ಪ ಪಶ್ಚಿಮದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಆ ವೇಳೆಯಲ್ಲಿ ಹದ್ದುಬಸ್ತು ಆಗಲಿಲ್ಲ ಎಂದರೆ ಸರಿ. 1982 ರಲ್ಲಿ ನಾನು ಹದ್ದುಬಸ್ತಿಗೆ ಅರ್ಜಿ ಹಾಕಿದ್ದೆ. 1982 ರಲ್ಲಿ ಹದ್ದುಬಸ್ತಿಗೆ ಹಾಕಿದ ಅರ್ಜಿಯ ದಾಖಲಾತಿಯನ್ನು ಹಾಜರು ಮಾಡಿದ್ದೇನೋ ಅಥವಾ ಇಲ್ಲವೋ ಎಂಬ ಬಗ್ಗೆ ನಾನು ನಮ್ಮ ವಕೀಲರನ್ನು ಕೇಳಬೇಕು. ದಾವಾ ಐಟಂ 2 ರ 22 ಗುಂಟೆ ಆಸ್ತಿಯು ಶಂಕರಮ್ಮ, ಬಸಮ್ಮ, ಕೂಸಪ್ಪ , ಶಿವಪ್ಪನ ಮಗ ಸ್ವಾಮಿ, ಪುಟ್ಟತಾಯಮ್ಮ ರವರಿಗೆ ಹೋಗಿದೆ, ಎಷ್ಟೆಷ್ಟು ಹೋಗಿದೆ ಎಂದು ಗೊತ್ತಿಲ್ಲ. ದಾವಾ ಆಸ್ತಿ 2 ರ ಚೆಕ್ಕುಬಂದಿ ತಪ್ಪು ಎಂದರೆ ಸರಿಯಲ್ಲ. ದಾವಾ ಐಟಂ 2 ರ ಪೂರ್ವಕ್ಕೆ ಸ.ನಂ. 196 ರಲ್ಲಿ 3 ಎಕರೆ 4 ಗುಂಟೆ ಇದೆ. ಪಶ್ಚಿಮಕ್ಕೆ ಪ್ರತಿವಾದಿ ಮಹದೇವಪ್ಪನ 3 ಎಕರೆ

ಓಎಸ್ 111/2022

ಪಿಡಬ್ಲ್ಯೂ-1

4 ಗುಂಟೆ ಜಮೀನು, ಉತ್ತರಕ್ಕೆ ಸ.ನಂ. 195 ರ ಸ್ವತ್ತು ನನಗೆ ಸೇರಿದ್ದು, ದಕ್ಷಿಣಕ್ಕೆ ಸ.ನಂ. 185ರ ಜಮೀನು ಇದೆ, ಪಶ್ಚಿಮಕ್ಕೆ ಮಹದೇವಪ್ಪ , ಪೂರ್ವಕ್ಕೆ ನಾನು ಇದ್ದೇನೆ. ಸ.ನ. 185 ಸರ್ಕಾರದ ಜಮೀನು, ಅದರಲ್ಲಿ ಒಂದು ಮುಕ್ಕಾಲು ಎಕರೆಯಲ್ಲಿ ನಾನು ಒಂದು ಎಕರೆ ಪಶ್ಚಿಮದಲ್ಲಿದ್ದೇನೆ, ಅವರು ಮುಕ್ಕಾಲು ಎಕರೆ ಪೂರ್ವದಲ್ಲಿದ್ದಾರೆ. ಸ.ನಂ. 185 ರ ಜಮೀನು 196/1, 196/2 ರಕ್ಕೆ ಒತ್ತಾಗಿದೆ, ಅಕ್ಕ- ಪಕ್ಕದಲ್ಲಿ ಇದೆ. ಸ.ನಂ. 196/2, 197/2 ರ ಜಮೀನು ಮತ್ತು 185 ರ ಜಮೀನು ಸೇರಿ ಒಟ್ಟು 5 ಎಕರೆ 9 ಗುಂಟೆಯಾಗುತ್ತದೆ ಎಂದರೆ ಸಾಕ್ಷಿಯು ಇನ್ನೂ ಹೆಚ್ಚಾಗುತ್ತದೆ ಎಂದು ನುಡಿಯುತ್ತಾರೆ. ನಾನು ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಂಡ ಕಾರಣ ನಾನು ಸರ್ವೆ ಮಾಡಿಸಲು ಮುಂದಾಗಿಲ್ಲ ಎಂದರೆ ಸರಿ. ನಮ್ಮ ತಂದೆ ಗೋಪಮ್ಮನಿಂದ ಪಡೆದರು ಎನ್ನಲಾದ ಜಮೀನು ಒಟ್ಟು 16 ಎಕರೆ 24 ಗುಂಟೆ ಇಲ್ಲ ಎಂದರೆ ಸರಿಯಲ್ಲ. ಸ.ನಂ. 196 ಮತ್ತು 197 ರಲ್ಲಿ ಇದೆ ಎನ್ನಲಾದ ನಮ್ಮ ಜಮೀನಿನಲ್ಲಿ ವಿಸ್ತೀರ್ಣ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಸ.ನಂ. 196/1 ಮತ್ತು 197/1 ರ ಒಟ್ಟು 5 ಎಕರೆ 13 ಗುಂಟೆ ಜಮೀನನ್ನು ಪ್ರತಿವಾದಿಗಳು ತಮ್ಮ ಕುಟುಂಬದಲ್ಲಿ ವಿಭಾಗ ಮಾಡಿಕೊಂಡು ಬೇರೆ - ಬೇರೆ ವಾಸವಿದ್ದಾರೆ ಎಂದರೆ ಸರಿಯಲ್ಲ. ನಮ್ಮದು ಎನ್ನಲಾದ ಒಟ್ಟು 8 ಎಕರೆ 12 ಗುಂಟೆಯ ಬಗ್ಗೆ ಸರ್ವೆ ಮಾಡಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ನಮ್ಮ ವಕೀಲರು ಮಾಡಿಸುತ್ತಾರೆ ಬಿಡಿ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯಲ್ಲಿ ಯಾವಾಗಲೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ